ಮೂಲ ದಾವಾ ನಂಃ136/2024

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **15.11.2025.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಂ.ಎಂ 1 ರಿಂದ 4 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನಾನು 4 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದು, ನನಗೆ ಓದಲು ಬರೆಯಲು ಬರುತ್ತದೆ. ಯಾವ ಪರಿಹಾರವನ್ನು ಕೇಳಿ, ಈ ದಾವೆಯನ್ನು ದಾಖಲಿಸಿದ್ದೀರಿ ಎಂದರೆ, ಕ್ರಯ ನೋಂದಣಿ ಮಾಡಿಕೊಡಬೇಕು ಇಲ್ಲವಾದ್ದಲ್ಲಿ ದುಡ್ಡು ವಾಪಸ್ಸು ಕೊಡಬೇಕೆಂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 50 ಜಂಟಿ ಹೆಸರಿಗೆ ಇದೆ ಎಂದರೆ ಸರಿ. ಸದರಿ ಸರ್ವೇ ನಂಬರಲ್ಲಿ ಇಂದ್ರವ್ವ ಇಂಗಳಕಿ ಎನ್ನುವವರ ಹೆಸರೂ ಸಹ ಇದೆ ಎಂದರೆ ಸರಿ. ಸದರಿ ಇಂದ್ರವ್ವರವರ ಹೆಸರು ಜಂಟಿಯಾಗಿರುವುದರಿಂದ, ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದು ಇರುವುದಿಲ್ಲ ಎಂದರೆ, ಅವರ ಹಿಸ್ಸೆಯೇ ಬೇರೆ ಇವರ ಹಿಸ್ಸೆಯೇ ಬೇರೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 50 ಈಗ ಪ್ರತಿವಾದಿಯರ ಕಬ್ಜೆಯಲ್ಲಿಲ್ಲ ಎಂದರೆ ಹೌದು. ಈಗ ಯಾರು ಸರ್ವೇ ನಂಬರ್ 50 ರ ಕಬ್ಜೆಯಲ್ಲಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಸರ್ವೇ ನಂಬರ್ 50 ರಲ್ಲಿ ಇಂದ್ರವ್ವ ಮಲ್ಲಪ್ಪ ಇಂಗಳಕಿ ಎನ್ನುವವರು ಕಬ್ಜೆಯಲ್ಲಿದ್ದಾರೆ ಎಂದರೆ, ಸಾಕ್ಷಿಯು ಇಬ್ಬರು ಜಂಟಿಯಾಗಿದ್ದಾರೆ ಎಂದು ನುಡಿಯುತ್ತಾರೆ. ಈಗ ಅಲ್ಲಿ ಇಂದ್ರವ್ವ ಮಲ್ಲಪ್ಪ ಇಂಗಳಕಿ ಎನ್ನುವವರು ಕಬ್ಜೆಯಲ್ಲಿದ್ದಾರೆ ಎಂದರೆ, ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಇದೆ ನ್ಯಾಯಾಲಯದಲ್ಲಿ ಇಂದ್ರವ್ವ ಮತ್ತು ಈ ಪ್ರತಿವಾದಿಯರ ನಡುವೆ ಪಾಲು ವಾಂಟಣೆ ದಾವೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಈ ದಾವೆಯ ದಾವಾಸ್ತಿಯ ಇಂದ್ರವ್ವರವರ ಪಾಲಿಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಆದ ಕಾರಣ, ಸದರಿ ಇಂದ್ರವ್ವ ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಿರುತ್ತಾರೆ ಎಂದರೆ ಇಲ್ಲ. ನಿಪಿ.2 ನ್ನು ನಿಂಬಾಯಿ ವಕೀಲರು ತಯಾರಿಸಿರುತ್ತಾರೆ. ಸದರಿ ದಾಖಲಾತಿಯನ್ನು ನ್ಯಾಯಾಲಯದಲ್ಲೇ ಬರೆದಿರುತ್ತಾರೆ. ನಿಪಿ.2 ಕ್ಕೆ ಮಹೇಶ ಹೊಸಕೊಪ್ಪ, ಪಾಳಾ, ತಿಪ್ಪಣ್ಣ ಗುರುಮನಿ, ಪಾಳಾ, ಶಿವಪ್ಪ ಮಾಳಪುರ, ಕೊಪ್ಪರಸಿಕೊಪ್ಪ ಮತ್ತು ನಾಗಪ್ಪ ಬಂಕಾಪುರ, ಕೊಪ್ಪರಸಿಕೊಪ್ಪ ರವರು ದಿನಾಂಕಃ 08.01.2014 ರಂದು ಸಹಿ ಮಾಡಿರುತ್ತಾರೆ. ನಿಪಿ.2 ಅಫಿಡವೀಟ್ ಆಗಿರುತ್ತದೆ , ಅದನ್ನು ನಿಮ್ಮ ವಕೀಲರಿಗೆ ಏನಾದರೂ ಹೇಳಿದ್ದೀರಾ ಎಂದರೆ, ಇಲ್ಲ. ನಿಪಿ.2 ರನ್ನು ಬರೆದಂತಹ ಅಫಿಡವೀಟನಲ್ಲಿ ಕರಾರು ಪತ್ರವನ್ನು ಬರೆಯಲು ಬರುವುದಿಲ್ಲ ಎಂದರೆ, ನನಗೆ ಗೊತ್ತಿಲ್ಲ. ನಿಪಿ.2 ಕ್ಕೆ ಒಪ್ಪಿಗೆ ಸಹಿಯನ್ನು ಅವರ ಹೆಂಡತಿ ಮತ್ತು ಒಬ್ಬ ಮಗ ಮಾಡಿರುತ್ತಾರೆ. ದಾವಾಸ್ತಿ ಪ್ರತಿವಾದಿಯರಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿ ಪ್ರತಿವಾದಿಯರ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಹೌದು. ನಾವು ಯಾವುದೇ ಕಾಲಕ್ಕೂ ಪಿತ್ರಾರ್ಜಿತ ಆಸ್ತಿಯನ್ನು ಖರೀದಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.2 ನ್ನು ನಾನೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಇಲ್ಲ. ನಿಪಿ.2 ಕ್ಕೆ ಸರಿಯಾದ ನ್ಯಾಯಾಲಯ ಶುಲ್ಕವನ್ನು ಭರಣ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಗಂಡ ಗೇಣಿ ನಾತೆಯಿಂದ ದಾವಾಸ್ತಿಯನ್ನು ನನಗೆ ಕೊಟ್ಟಿದ್ದರು ಎಂದರೆ, ಸಾಕ್ಷಿಯು ಖರೀದಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಗಂಡ ಜೀವಂತ ಇರುವಾಗ ಅವರ ಕಡೆಯಿಂದ ಮತ್ತು 1 ಮತ್ತು 2 ನೇ ಪ್ರತಿವಾದಿಯರ ಕಡೆಯಿಂದ ಖಾಲಿ ಸ್ಟ್ಯಾಂಪ್ ಪೇಪರ ಮೇಲೆ ಸಹಿ ಪಡೆದುಕೊಂಡಿರುತ್ತೇನೆ, ಹೊರತು, ಅವರು ಯಾವುದೇ ಕ್ರಯ ಕರಾರು ಪತ್ರ ಮಾಡಿಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡ ಜೀವಂತ ಇರುವ ಕಾಲಕ್ಕೆ ಈ ದಾವೆಯನ್ನು ಹಾಕಲು ಏನಾದರೂ ತೊಂದರೆ ಇತ್ತೆ ಎಂದರೆ, ಸಾಕ್ಷಿಯು ನಾವು ಹೋಗಿ ಕೇಳಿದೇವು, ಅವರು ಮಾಡಿಕೊಡುತ್ತೇವೆಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ಗೇಣಿಗಾಗಿ ತೆಗೆದುಕೊಂಡಂತಹ ಛಾಪಾ ಕಾಗದವನ್ನು ಕೊಡುವಂತೆ ಕೇಳಿರುತ್ತಾರೆ ಎಂದರೆ ಇಲ್ಲ. 1 ನೇ ಪ್ರತಿವಾದಿಯ ಗಂಡ ತೀರಿಕೊಂಡ ನಂತರ, ನಮಗೆ ಬೇರೆ ಜಮೀನು ಇಲ್ಲ, ದಾವಾಸ್ತಿಯನ್ನು ತಾವೇ ಸಾಗುವಳಿ ಮಾಡುತ್ತೇವೆ ಎಂದು ಹೇಳಿ, ನನಗೆ ಕೊಟ್ಟಂತಹ ಗೇಣಿಯನ್ನು ಬಿಡಿಸಿಕೊಂಡರು ಎಂದರೆ, ನಾವು ಖರೀದಿಗೆ ತೆಗೆದುಕೊಂಡಿರುತ್ತೇವೆ, ಗೇಣಿಯನ್ನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಆಗ ನಾನು ಈ ಛಾಪಾ ಕಾಗದವನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಇಲ್ಲ. 1 ನೇ ಪ್ರತಿವಾದಿಯ ಗಂಡನಿಗೆ ದಾವಾಸ್ತಿ ಮಾರಾಟ ಮಾಡುವ ಅನಿವಾರ್ಯತೆ ಇರಲಿಲ್ಲ ಎಂದರೆ, ಅವರ ಮಗಳ ಮದುವೆ ಮಾಡಬೇಕೆಂದು ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 1 ರಿಂದ 4 ನೇ ಪ್ರತಿವಾದಿಯರ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**